Flipkart FOUNDATION

# ಫ್ಲಿಪ್ ಕಾರ್ಟ್ ಫೌಂಡೇಶನ್, ಗೀವ್ ಫೌಂಡೇಶನ್ ಮತ್ತು ಪಿಂಕಿಶಿ ಫೌಂಡೇಶನ್ ಸಹಭಾಗಿತ್ವದಲ್ಲಿ ಕರ್ನಾಟಕ ಸೇರಿ 4 ರಾಜ್ಯಗಳಲ್ಲಿ `ಪ್ರಾಜೆಕ್ಟ್ ಉಡಾನ್' ಜಾರಿ

- **ದುರ್ಬಲ ವರ್ಗದ ಮಹಿಳೆಯರು ಮತ್ತು ಹೆಣ್ಣು ಮಕ್ಕಳಲ್ಲಿ ಮುಟ್ಟಿನ ವೇಳೆಯಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಲು ಅರಿವು ಮೂಡಿಸುವ ಯೋಜನೆ**
- **ಮುಟ್ಟಿನ ವೇಳೆ ಸುರಕ್ಷಿತ ಮತ್ತು ಸಮರ್ಥವಾದ ಉತ್ಪನ್ನಗಳ ಬಳಕೆಯ ಬಗ್ಗೆ ಹದಿಹರೆಯದ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಜಾಗೃತಿ ಮೂಡಿಸುವ ಉಪಕ್ರಮವಿದು**
- **ನಾಲ್ಕು ರಾಜ್ಯಗಳಾದ ಗುಜರಾತ್, ಕರ್ನಾಟಕ, ಹರ್ಯಾಣ ಮತ್ತು ಉತ್ತರ ಪ್ರದೇಶದ 1600 ಹೆಣ್ಣು ಮಕ್ಕಳು ಮತ್ತು 3200 ಮಹಿಳೆಯರಿಗೆ ಈ ಉಪಕ್ರಮದಿಂದ ಪ್ರಯೋಜನ**

ಬೆಂಗಳೂರು, ಆಗಸ್ಟ್ 25, 2023: ಫ್ಲಿಪ್ ಕಾರ್ಟ್ ಫೌಂಡೇಶನ್ ಮತ್ತು ಗೀವ್ ಫೌಂಡೇಶನ್ ಸಂಸ್ಥೆಗಳು ಭಾರತದಲ್ಲಿನ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಜೀವನ ಮಟ್ಟ ಸುಧಾರಣೆಗೆ ಶ್ರಮಿಸುತ್ತಿರುವ ಲಾಭ-ರಹಿತ ಸಂಸ್ಥೆಯಾಗಿರುವ ಪಿಂಕಿಶಿ ಜೊತೆಗೆ ಸಹಭಾಗಿತ್ವ ಮಾಡಿಕೊಂಡಿವೆ. ಈ ಮೂರೂ ಸಂಸ್ಥೆಗಳು ಮಹಿಳೆಯರಲ್ಲಿ ಮುಟ್ಟಿನ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಸಹಭಾಗಿತ್ವ ಮಾಡಿಕೊಂಡಿವೆ. `ಪ್ರಾಜೆಕ್ಟ್ ಉಡಾನ್' ಹೆಸರಿನ ಉಪಕ್ರಮದ ಮೂಲಕ ವಿಶೇಷವಾಗಿ ಗ್ರಾಮಾಂತರ ಪ್ರದೇಶ ಸೇರಿದಂತೆ ದೇಶಾದ್ಯಂತದ ದುರ್ಬಲ ವರ್ಗದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಋತುಚಕ್ರದ ವೇಳೆ ಎದುರಿಸುವ ಸವಾಲುಗಳನ್ನು ಪರಿಹರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಮುಟ್ಟಿನ ಸಂದರ್ಭದಲ್ಲಿ ಬಳಸಬಹುದಾದ ಪರಿಸರಸ್ನೇಹಿ ಉತ್ಪನ್ನಗಳನ್ನು ಪೂರೈಕೆ ಮಾಡುವುದು ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಈ ಮೂಲಕ ಈ ಯೋಜನೆಯು ಆರೋಗ್ಯ ಕಾಪಾಡಿಕೊಳ್ಳುವುದು ಮತ್ತು ನಡವಳಿಕೆಯ ಅಭ್ಯಾಸಗಳ ಬಗ್ಗೆ ಮಹಿಳೆಯರಲ್ಲಿ ಮನವರಿಕೆ ಮಾಡಿಕೊಡುವ ಕೆಲಸ ಮಾಡಲಿದೆ. ಯೋಜನೆಯನ್ನು ನಾಲ್ಕು ರಾಜ್ಯಗಳಾದ ಗುಜರಾತ್ ನ ಗಾಂಧಿನಗರ ಮತ್ತು ಮೆಹ್ಸಾನಾ,

ಹರ್ಯಾಣದ ಗುರುಗ್ರಾಮ, ಕರ್ನಾಟಕದ ಬೆಂಗಳೂರು ಮತ್ತು ಉತ್ತರ ಪ್ರದೇಶದ ವಾರಣಾಸಿಯಲ್ಲಿ ಜಾರಿಗೆ ತರಲಾಗುತ್ತಿದೆ.

ಮುಟ್ಟಿನ ಸಂದರ್ಭದಲ್ಲಿ ಹದಿಹರೆಯದ ಹೆಣ್ಣು ಮಕ್ಕಳನ್ನು ಸಶಕ್ತಗೊಳಿಸಿ ಉತ್ತಮ ನೈರ್ಮಲ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲಿರುವ ಈ ಯೋಜನೆಯು, ಮುಟ್ಟಿನ ವೇಳೆಯಲ್ಲಿ ಸೂಕ್ತವಾದ ರೀತಿಯಲ್ಲಿ ಆರೋಗ್ಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದನ್ನು ಉತ್ತೇಜಿಸಲಿದೆ. ಇದರ ಜೊತೆಗೆ ಯುವತಿಯರು ಮತ್ತು ಮಹಿಳೆಯರಲ್ಲಿ ಘನತೆ ಮತ್ತು ಆತ್ಮವಿಶ್ವಾಸದ ಪ್ರಜ್ಞೆ ಮೂಡುವಂತೆ ಮಾಡಲಿದೆ. ಈ ಕಾರ್ಯಕ್ರಮದ ಪ್ರಮುಖ ಗುರಿಯೆಂದರೆ 10 ರಿಂದ 18 ವರ್ಷ ವಯೋಮಾನದ ಹೆಣ್ಣು ಮಕ್ಕಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದಾಗಿದೆ. ಸ್ಥಳೀಯ ತಂಡಗಳೊಂದಿಗೆ ಸೇರಿ 20 -25 ಶಾಲೆಗಳಲ್ಲಿನ 1600 ಹೆಣ್ಣು ಮಕ್ಕಳು ಮತ್ತು ಪರೋಕ್ಷವಾಗಿ ಸುತ್ತಮುತ್ತಲಿನ ಪರಿಸರದ 3200 ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಆಯ್ಕೆ ಮಾಡುವ ಪ್ರತಿ ಶಾಲೆಯ 50 -100 ಹೆಣ್ಣು ಮಕ್ಕಳ ತಂಡಗಳಿಗೆ ಎರಡು ಗಂಟೆಗಳ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ನೈರ್ಮಲ್ಯ ಪದ್ಧತಿಗಳನ್ನು ರೂಢಿಸಿಕೊಳ್ಳುವುದು, ಮುಟ್ಟಿನ ಸಂದರ್ಭದಲ್ಲಿ ಬಳಸುವ ಉತ್ಪನ್ನಗಳ ಆಯ್ಕೆಗಳು ಮತ್ತು ಆ ಉತ್ಪನ್ನಗಳ ವಿಲೇವಾರಿ, ಆರೋಗ್ಯ ಹಾಗೂ ಪೌಷ್ಟಿಕಾಂಶದ ಬಗ್ಗೆ ಅರಿವು ಮೂಡಿಸಲಾಗುತ್ತದೆ. ನೋವು- ಸಂಕಟ ಸೇರಿದಂತೆ ಮುಟ್ಟಿನ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕೆಂಬುದರ ಬಗ್ಗೆಯೂ ಈ ಕಾರ್ಯಾಗಾರದಲ್ಲಿ ಹೇಳಿಕೊಡಲಾಗುತ್ತದೆ.

ಇದಲ್ಲದೇ, ಪ್ರತಿ ಹುಡುಗಿಗೆ ಕನಿಷ್ಠ ಎರಡು ವರ್ಷಗಳ ಕಾಲ ಪರಿಸರ ಸ್ನೇಹಿ ಮುಟ್ಟಿನ ಆರೋಗ್ಯವನ್ನು ನಿರ್ವಹಣೆ ಮಾಡುವುದನ್ನು ಖಚಿತಪಡಿಸಲು ಅಗತ್ಯವಿರುವ ಮರುಬಳಕೆ ಮಾಡಬಹುದಾದ ಬಟ್ಟೆ ಪ್ಯಾಡ್ ಗಳು, ಸೂಚನಾ ಪುಸ್ತಕ ಮತ್ತು ಇತರ ಅಗತ್ಯ ವಸ್ತುಗಳನ್ನು ಒಳಗೊಂಡ ಮುಟ್ಟಿನ ಕಿಟ್ ಗಳನ್ನು ಈ ಕಾರ್ಯಾಗಾರದ ವೇಳೆ ನೀಡಲಾಗುತ್ತದೆ.

ಈ ಪಾಲುದಾರಿಕೆ ಬಗ್ಗೆ ಮಾತನಾಡಿ ಫ್ಲಿಪ್ ಕಾರ್ಟ್ ಫೌಂಡೇಶನ್ ನ ನಿರ್ದೇಶಕರಾದ ಪೂಜಾ ತ್ರಿಶಾಲ್ ಅವರು, ``ಸಬಲೀಕರಣವು ಜ್ಞಾನ ಮತ್ತು ಲಭ್ಯತೆಯಿಂದ ಆರಂಭವಾಗುತ್ತದೆ ಎಂಬುದರ ಬಗ್ಗೆ ನಾವು ನಂಬಿಕೆ ಇಟ್ಟಿದ್ದೇವೆ. ಪಿಂಕಿಶಿ ಫೌಂಡೇಶನ್ ಸಹಭಾಗಿತ್ವದಲ್ಲಿ `ಪ್ರಾಜೆಕ್ಟ್ ಉಡಾನ್' ಅನ್ನು ಆರಂಭಿಸುವ ಮೂಲಕ ನಾವು ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಯುವತಿಯರು ಮತ್ತು ಮಹಿಳೆಯರನ್ನು ಸಬಲರನ್ನಾಗಿಸುವ ನಿಟ್ಟಿನಲ್ಲಿ ಅವರಿಗೆ ಶಿಕ್ಷಣ ನೀಡುವ ಮಹತ್ವದ ಹೆಜ್ಜೆ ಇಟ್ಟಿದ್ದೇವೆ. ಮುಟ್ಟಿನ ಸಂದರ್ಭದಲ್ಲಿ ಅನುಸರಿಬೇಕಾದ ಅಗತ್ಯ ಆರೋಗ್ಯ ಕ್ರಮಗಳು ಹಾಗೂ ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆ ಮಾಡುವ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣು

ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬುವ ಮತ್ತು ಆರೋಗ್ಯಕರವಾದ ಭವಿಷ್ಯವನ್ನು ರೂಪಿಸಿಕೊಳ್ಳುವ ಮಾರ್ಗಗಳ ಬಗ್ಗೆ ಅರಿವು ಮೂಡಿಸಲು ಬಯಸುತ್ತೇವೆ. ಹೆಚ್ಚು ಜನರನ್ನು ಒಳಗೊಳ್ಳುವಂತೆ ಮಾಡುವ ಮತ್ತು ಸಶಕ್ತ ಸಮಾಜದ ಕಡೆಗೆ ನಾವು ದೃಢವಾಗಿ ಹೆಜ್ಜೆ ಇಟ್ಟಿದ್ದು, ಈ ಮೂಲಕ ಪ್ರತಿಯೊಬ್ಬರನ್ನೂ ತಲುಪುವ ಪ್ರಯತ್ನ ನಡೆಸಲಿದ್ದೇವೆ" ಎಂದು ತಿಳಿಸಿದರು.

ಪಿಂಕಿಶಿ ಫೌಂಡೇಶನ್ ಅಧ್ಯಕ್ಷರಾದ ಅರುಣ್ ಗುಪ್ತಾ ಅವರು ಮಾತನಾಡಿ, ``ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಋತು ಚಕ್ರದ ಸಂದರ್ಭದಲ್ಲಿ ಅನುಸರಿಸಬೇಕಾದ ಆರೋಗ್ಯಕರ ಕ್ರಮಗಳ ಬಗ್ಗೆ ಶಿಕ್ಷಣ ಮತ್ತು ಪರಿಸರಸ್ನೇಹಿ ಮರುಬಳಕೆ ಮಾಡಬಹುದಾದ ಬಟ್ಟೆಯ ಪ್ಯಾಡ್ ಗಳನ್ನು ಒದಗಿಸುವ ನಮ್ಮ ಯೋಜನೆಗೆ ಬೆಂಬಲ ನೀಡುತ್ತಿರುವ ಫ್ಲಿಪ್ ಕಾರ್ಟ್ ಫೌಂಡೇಶನ್ ನ ದೂರದೃಷ್ಟಿ ಮತ್ತು ದಿಟ್ಟ ನಾಯಕತ್ವಕ್ಕೆ ನಾವು ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಈ ಪ್ರಮುಖವಾದ ಯೋಜನೆ ಮೂಲಕ ನಾವು ಸಾವಿರಾರು ಹೆಣ್ಣು ಮಕ್ಕಳು ತಮಗೆ ಎದುರಾಗುವ ಸಮಸ್ಯೆಗಳು ಮತ್ತು ತೊಂದರೆಗಳನ್ನು ಪರಿಹರಿಸಿಕೊಂಡು ಪರಿಸರ ಸುಸ್ಥಿರತೆಯನ್ನು ಸ್ಥಾಪಿಸುವುದನ್ನು ಉತ್ತೇಜಿಸುತ್ತಿದ್ದೇವೆ. ಮುಟ್ಟಿನ ಸಮಸ್ಯೆಗಳು ಯಾವುದೇ ಹೆಣ್ಣು ಮಗುವಿಗೆ ಅಡ್ಡಿಯಾಗದ ರೀತಿಯಲ್ಲಿ ಎಲ್ಲರನ್ನೂ ಒಳಗೊಳ್ಳುವಿಕೆಯ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ನಾವು ಒಗ್ಗಟ್ಟಾಗಿ ಶ್ರಮಿಸುತ್ತೇವೆ. ಈ ದಿಸೆಯಲ್ಲಿ ನಮ್ಮೊಂದಿಗೆ ಕೈಜೋಡಿಸಿಸಕಾರಾತ್ಮಕ ಸಾಮಾಜಿಕ ಪ್ರಭಾವವನ್ನು ಉಂಟು ಮಾಡುವ ಕೆಲಸಕ್ಕೆ ಚಾಲನೆ ನೀಡಿರುವುದು ಮತ್ತು ಶಿಕ್ಷಣ, ಸಬಲೀಕರಣ ಹಾಗೂ ಪರಿಸರ ಪ್ರಶ್ನೆಯ ಪರಿಹಾರಗಳನ್ನು ಒದಗಿಸುತ್ತಿರುವುದಕ್ಕೆ ನಾವು ಫ್ಲಿಪ್ ಕಾರ್ಟ್ ಫೌಂಡೇಶನ್ ಗೆ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಮೂಲಕ ನಾವೆಲ್ಲಾ ಒಟ್ಟಾಗಿ ಪ್ರಕಾಶಮಾನವಾದ, ಹಸಿರು ಮತ್ತು ಹೆಚ್ಚು ಸಮಾನವಾದ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗಿದ್ದೇವೆ" ಎಂದರು.

ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿರುವ ಹಿಂದುಳಿದ ವರ್ಗದ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಗಮನವನ್ನು ಹರಿಸುವ ಮೂಲಕ ಪ್ರಾಜೆಕ್ಟ್ ಉಡಾನ್ ಮುಟ್ಟಿನ ನೈರ್ಮಲ್ಯ ಸಂಪನ್ಮೂಲಗಳನ್ನು ಪೂರೈಕೆ ಮಾಡಲಿದೆ. ಇದಲ್ಲದೇ, ನೈರ್ಮಲ್ಯ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಅರಿವು ಮೂಡಿಸಲಾಗುತ್ತಿದ್ದು, ಮುಟ್ಟಿನ ಸಂದರ್ಭದಲ್ಲಿ ಬಳಸುವ ಉತ್ಪನ್ನಗಳನ್ನು ಖರೀದಿಸಲು ಸಾಧ್ಯವಾದ ಸ್ಥಿತಿಯಲ್ಲಿರುವ ಹೆಣ್ಣು ಮಕ್ಕಳಿಗೆ ಇರುವ ಆರ್ಥಿಕ ಅಡೆತಡೆಗಳನ್ನು ನಿವಾರಿಸುವ ಗುರಿಯನ್ನು ಹೊಂದಲಾಗಿದೆ. ಈ ಮೂಲಕ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ತಕ್ಷಣದ ಪರಿಹಾರಗಳನ್ನು ಒದಗಿಸಿ ಅವರಲ್ಲಿ ನಿರಂತರ ಮುಟ್ಟಿನ ಆರೋಗ್ಯದ ಅಭ್ಯಾಸಗಳನ್ನು ಉತ್ತೇಜಿಸುವ ಮೂಲಕ ಶಾಶ್ವತ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ.

ಕಳೆದ ಹಲವು ವರ್ಷಗಳಿಂದ ಫ್ಲಿಪ್ ಕಾರ್ಟ್ ಫೌಂಡೇಶನ್ ಆಂಧ್ರಪ್ರದೇಶ, ಕರ್ನಾಟಕ, ಅಸ್ಸಾಂ, ಹರ್ಯಾಣ, ಮಹಾರಾಷ್ಟ್ರ, ತೆಲಂಗಾಣ, ಉತ್ತರಾಖಂಡ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಹಿಂದುಳಿದ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಸೇವೆ ಸಲ್ಲಿಸುತ್ತಾ ಬಂದಿದೆ. ಈ ಪ್ರದೇಶಗಳಲ್ಲಿ ಕೌಶಲ್ಯಾಭಿವೃದ್ಧಿಗೆ ಬೆಂಬಲ ನೀಡುತ್ತಿದ್ದು, ಸಮಾಜದ ದುರ್ಬಲ ವರ್ಗಗಳ ಕಲ್ಯಾಣ ಮತ್ತು ಸಬಲೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದು ಅವರಲ್ಲಿ ಸುಸ್ಥಿರವಾದ ಪರಿಣಾಮ ಕಾಣುವಂತೆ ಮಾಡುತ್ತಿದೆ.

**Xxxxxxx**

## ಫೋಟೋ ಶೀರ್ಷಿಕೆ: ಬೆಂಗಳೂರಿನ ಪರಪ್ಪನ ಅಗ್ರಹಾರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಜೆಕ್ಟ್ ಉಡಾನ್ ಗೆ ಚಾಲನೆ ನೀಡಲಾಯಿತು.

**About the Flipkart Group**

The Flipkart Group is one of India’s leading digital commerce entities and includes group companies Flipkart, Myntra, Flipkart Wholesale, Flipkart Health+, and Cleartrip. Started in 2007, Flipkart has enabled millions of sellers, merchants, and small businesses to participate in India's digital commerce revolution. With a registered customer base of more than 450 million, Flipkart's marketplace offers over 150 million products across 80+ categories. Today, there are over 11 lakh sellers on the platform, including Shopsy sellers. With a focus on empowering and delighting every Indian by delivering value through technology and innovation, Flipkart has created lakhs of jobs in the ecosystem while empowering generations of entrepreneurs and MSMEs. Flipkart is known for pioneering services such as Cash on Delivery, No Cost EMI and easy returns, which are customer-centric innovations that have made online shopping more accessible and affordable for millions of Indians.

**About Pinkishe Foundation**

Pinkishe Foundation, a New Delhi-based non-profit, was established in 2017 with a powerful mission: to shatter the silence around periods. Through their dedicated team of primarily women volunteers, Pinkishe is transforming the narrative on menstrual health & hygiene management (MHHM) across India. They conduct impactful workshops and awareness programs in schools, colleges, and underserved communities, helping to educate and empower women. Pinkishe's focus on safe and sustainable period products has made a significant impact, and they provide free pad kits to their target population. With a strong partner network involving corporates, colleges, and other NGOs, Pinkishe has become a leading player in the MHHM space. Their efforts have directly benefited over 500,000 girls and women, earning them well-deserved recognition with multiple awards. Pinkishe Foundation's work is reshaping attitudes and lives, promoting a future where menstruation is no longer a taboo but a celebrated aspect of women's health and well-being.

**For more information, please write to media@flipkart.com**